



ಡಾ॥ ಚಕ್ಕೆರೆ ಶಿವಶಂಕರ್

# ಕೊಡವ ಕಲೆಗಳು



ಜಾನಪದ ಪುಸ್ತಕ ಮಾಲೆ - ೯

# ಕೊಡವ ಜನಪದ ಕಲೆಗಳು

ಡಾ॥ ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

**KODAVA KARNATAKA JANAPADA KALEGALU** - By Dr. Chakkere Shivashankara, Pulished by Karnataka Janapada Parishath No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054, Phone : 080-23605033. Janapada Loka : 7201143 / 7271555.

ಹಕ್ಕುಗಳು ಲೇಖಕರಿಗೆ ಸೇರಿವೆ

ಪ್ರಥಮ ಮುದ್ರಣ : ೨೦೦೮

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿಗಳು)

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ॥ ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ–ಸಂಚಾಲಕರು |

ಮುದ್ರಕರು :
**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು–೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜಾನಪದ ಜನಪ್ರಿಯ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಡಾ. ಚಕ್ಕೆರೆ ಶಿವಶಂಕರ್ ಅವರು **'ಕೊಡವ ಜನಪದ ಕಲೆಗಳು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ಲೇಖಕರ ಮಾತು

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿಕೊಂಡ ಜನಪದ ಕಲೆಗಳು ಜನಪದದ ಕಲಾತ್ಮಕ ಅಭಿವ್ಯಕ್ತಿ. ವರ್ಣರಂಜಿತ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ, ಹಾಡುಗಾರಿಕೆ, ಕುಣಿತ, ಅಭಿನಯ ಮೊದಲಾದ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು ಎಂದರೆ ತಪ್ಪಲ್ಲ.

ಕರ್ನಾಟಕದಲ್ಲಿ ಸುಮಾರು ೨೦೦ ಕ್ಕೂ ಹೆಚ್ಚು ಜನಪದ ಕಲೆಗಳು ಪ್ರಚಲಿತದಲ್ಲಿವೆ. ಇವುಗಳಲ್ಲಿ ಕೆಲವು ಪ್ರಕಾರಗಳಂತೂ ಸಾರ್ವತ್ರಿಕ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಹಲವು ಪ್ರಕಾರಗಳು ಆಯಾ ಪ್ರದೇಶಕ್ಕೆ ಮಾತ್ರವೇ ಸೀಮಿತವಾಗಿ ಉಳಿದುಕೊಂಡು ಬಂದಿವೆ. ಇಂತಹ ಪ್ರಾದೇಶಿಕ ಜನಪದ ಕಲೆಗಳಲ್ಲಿ ಕೆಲವನ್ನು ಆಯ್ದು ಈ ಕಿರುಹೊತ್ತಿಗೆಯಲ್ಲಿ ಬಣ್ಣದ ಛಾಯಾಚಿತ್ರಗಳೊಂದಿಗೆ ಪರಿಚಯಿಸಲಾಗಿದೆ. ಆದ್ದರಿಂದ ಆಯಾ ಭಾಗದ ಕಲೆಗಳು ಎಂದಾಗ ಇದು ಸಮಗ್ರವಲ್ಲ. ಕೇವಲ ಪ್ರಾತಿನಿಧಿಕ ಕಲೆಗಳ ಪರಿಚಯವಷ್ಟೆ.

ಕರ್ನಾಟಕ ಜಾನಪದ ಪರಿಷತ್ತು ಜನಪ್ರಿಯ ಜಾನಪದ ಪುಸ್ತಕ ಮಾಲೆಯಲ್ಲಿ ಜಾನಪದದ ವಿವಿಧ ಸಂಗತಿಗಳನ್ನು ಕುರಿತು ಪರಿಚಯಿಸುವ ಸಲುವಾಗಿ ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಿರುವುದು ಪ್ರಶಂಸಾರ್ಹ. ಇಂತಹ ಕಿರುಹೊತ್ತಿಗೆಗಳು ಮಕ್ಕಳಿಂದ ಮೊದಲುಗೊಂಡು ನವ ಸಾಕ್ಷರರವರೆಗೂ ಅರಿವು ಮೂಡಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಈ ಕಿರುಹೊತ್ತಿಗೆಗಳ ಪ್ರಕಟಣೆಗೆ ಕಾರಣರಾದ ಕರ್ನಾಟಕ ಜಾನಪದ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಮತ್ತು ಗ್ರಂಥ ಪ್ರಕಟಣಾ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

**ಡಾ. ಚಕ್ಕೆರೆ ಶಿವಶಂಕರ್**

# ಉಮ್ಮತ್ತಾಟ್

ಕೊಡವ ಮಹಿಳೆಯರಿಗೆ ಮಾತ್ರವೇ ಮೀಸಲಾದ ಉಮ್ಮತ್ತಾಟ್ ಕುಣಿತದ ಹಿನ್ನೆಲೆಯಲ್ಲಿ ಸಮುದ್ರ ಮಥನದ ಕಥೆ ಇದೆ. ಸಮುದ್ರ ಮಥನ ಕಾಲದಲ್ಲಿ ಉದ್ಭವಿಸಿದ ಅಮೃತವನ್ನು ರಾಕ್ಷಸರಿಗೆ ದಕ್ಕದಂತೆ ಮಾಡಲು ಮೋಹಿನಿ ರೂಪ ತಾಳಿದ ವಿಷ್ಣು ತನ್ನ ನಾನಾ ರೀತಿಯ ಹಾವಭಾವ, ಒನಪು ವಯ್ಯಾರ, ವಿಭ್ರಮ ವಿಲಾಸಗಳಿಂದ ಅಸುರರನ್ನು ಬೆರಗುಗೊಳಿಸಿ ಸುರರಿಗೆ ಅಮೃತವನ್ನು ಹಂಚಿದ ಸಂಕೇತವೇ ಉಮ್ಮತ್ತಾಟ್ ಎಂದು ಕೊಡವರ ನಂಬಿಕೆ. ಈ ಕಥೆಗಿಂತಲೂ ಹೆಚ್ಚಾಗಿ ಉಮ್ಮತ್ತಾಟ್ ಎಂಬುದು ಕೊಡವರ ಕುಲದೇವತೆಯಾದ ಕಾವೇರಮ್ಮನ ಆರಾಧನೆ ಎಬುದು ದಿಟ. ಗೀತ–ನರ್ತನವನ್ನು ಒಳಗೊಂಡ ಈ ಸೌಮ್ಯ ಕಲೆಯನ್ನು ಸಾಮಾನ್ಯವಾಗಿ ಕೊಡವ ಮಹಿಳೆಯರು ತಮ್ಮ ಹಬ್ಬ ಹರಿದಿನಗಳಲ್ಲಿ ಮಾತ್ರ ಪ್ರದರ್ಶಿಸುತ್ತಾರೆ.

ತಲೆಗೆ ಕೆಂಪು ವಸ್ತ್ರ, ತುಂಬುದೋಳಿನ ರವಿಕೆ, ಹಿಂದಕ್ಕೆ ನೆರಿಗೆ ಬಿಟ್ಟು ಉಟ್ಟ ಸೀರೆ, ಕೊರಳಲ್ಲಿ ಮಣಿಮಾಲೆ, ಕೈಗಳಲ್ಲಿ ಬಳೆ, ಹಣೆಯಲ್ಲಿ ಕುಂಕುಮದ ಬಟ್ಟು ಹೀಗೆ ತಮ್ಮ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನು ಧರಿಸಿದ ಮಹಿಳೆಯರು ಉಂಗುರಾಕೃತಿಯಲ್ಲಿ ನಿಲ್ಲುತ್ತಾರೆ. ಮಧ್ಯದಲ್ಲಿ ದೀಪವೊಂದನ್ನು ಹಚ್ಚಿಡುತ್ತಾರೆ. ಕೈಯಲ್ಲಿ ಕಂಚಿನ ತಾಳ ಹಿಡಿದು ಮಧ್ಯದಲ್ಲಿ ಹಚ್ಚಿಟ್ಟ ದೀಪದ ಸುತ್ತ ಹಾಡಿಕೊಂಡು ಕುಣಿಯುತ್ತಾರೆ. ಅವಿವಾಹಿತ ಯುವತಿಯರೇ ಹೆಚ್ಚಾಗಿ ಪಾಲ್ಗೊಳ್ಳುವ ಈ ಕುಣಿತದಲ್ಲಿ ಇಂತಿಷ್ಟೇ ಜನರಿರಬೇಕೆಂಬ ನಿಯಮವೇನಿಲ್ಲ. ಕೆಲವು ಯುವತಿಯರು ತುಸು ಮಗ್ಗುಲಲ್ಲಿ ನಿಂತು ಕಾವೇರಿ ತಾಯಿಯ ಮೇಲೆ ಸ್ತುತಿ ಗೀತೆಗಳನ್ನು ಹಾಡುತ್ತಿರುತ್ತಾರೆ. ಪ್ರತಿ ಹಾಡಿಗೂ, ಕುಣಿಯುವ ಯುವತಿಯರ ಸುತ್ತುವ, ತಾಳ ಹಾಕುವ ಮತ್ತು ಕುಣಿಯುವ ಗತ್ತು ಭಂಗಿಗಳು ವ್ಯತ್ಯಾಸವಾಗುತ್ತಾ ಹೋಗುತ್ತವೆ.

ಒಮ್ಮೆ ತಮ್ಮಷ್ಟಕ್ಕೆ ತಾವೇ ತಾಳ ಹಾಕಿದರೆ, ಮತ್ತೊಮ್ಮೆ ಇಬ್ಬಿಬ್ಬರು ಎದುರಾಗಿ ತಾಳಕ್ಕೆ ತಾಳ ಕೊಡುತ್ತಾರೆ. ಮಗುದೊಮ್ಮೆ ಎಡಕ್ಕೆ, ಬಲಕ್ಕೆ ತಿರುಗಿ ಎದುರು ತಾಳ ಕೊಡುತ್ತಾರೆ. ಕೆಲವು ಬಾರಿ ಕೆಲವರು ನಿಂತು, ಕೆಲವರು ಕುಳಿತು ತಾಳ ಹಾಕುತ್ತಾರೆ. ನಿಂತ ಯುವತಿಯರು ಹಾಡುವ ಹಾಡುಗಳನ್ನು ಪುನರುಚ್ಚರಿಸುತ್ತಾ ಕುಣಿಯುವ ಯುವತಿಯರು



ಯಾವ ಭಂಗಿಗಳಲ್ಲಿ ಕುಣಿಯುತ್ತಿದ್ದರೂ ಸಹ ಚಲನೆ ಮಾತ್ರ ಮಂದಗತಿಯೇ ಇರುತ್ತದೆ. ತಾಳದ ಗತಿ ತೀವ್ರವಾದಂತೆಲ್ಲಾ ಚಲನೆಯೂ ಸಹ ತೀವ್ರಗೊಂಡು ಪರಾಕಾಷ್ಠತೆಗೇರಿದಾಗ ಪ್ರದರ್ಶನಕ್ಕೆ ಕಳೆ ಕಟ್ಟುತ್ತದೆ.

ಸುಂದರ ಕೊಡವ ತರುಣಿಯರ ನರ್ತನ ಕಣ್ಣಿಗೆ ಹಬ್ಬ. ದೀಪದ ಸುತ್ತ ಕುಣಿವ ಸಂಗೀತ ನೃತ್ಯದ ಮಧುರ ಮಿಶ್ರಣವಾದ ಉಮ್ಮತ್ತಾಟ್

ಏಳು ಬಗೆಯ ಕುಣಿತದ ಪ್ರಕಾರಗಳನ್ನು ಒಳಗೊಂಡಿದ್ದು, ಹಾಡುಗಳಲ್ಲಿಯೂ ಸಹ ಕೇವಲ ಕಾವೇರಿ ಮಾತೆಯ ಸ್ತುತಿಯಷ್ಟೇ ಅಲ್ಲದೆ, ಕೊಡಗಿನ ಜನತೆ, ಸುಂದರ ಪರಿಸರ, ಕೊಡವರ ಅತಿಥಿ ಸತ್ಕಾರ ಇವೇ ಮೊದಲಾದವುಗಳನ್ನು ಒಳಗೊಂಡಿರುತ್ತವೆ. ಕಾವೇರಿ ಮಾತೆಯ ಮಂಗಳದೊಂದಿಗೆ ಕುಣಿತವೂ ಮುಕ್ತಾಯಗೊಳ್ಳುತ್ತದೆ. ಉಮ್ಮತ್ತಾಟ್ ಕುಣಿತಕ್ಕೆ ಆರಾಧನೆಯ ಮುಖವೂ ಇದೆ; ಮನರಂಜನೆ ಮುಖವೂ ಇದೆ. ಕೊಡವ ಮಹಿಳೆಯರು ತಮ್ಮ ಸಂತೋಷಕ್ಕೆ ಸುಗ್ಗಿ ಮತ್ತು ವಸಂತ ಕಾಲದಲ್ಲಿ, ದೇವರ ಉತ್ಸವ, ಸಮಾರಂಭಗಳಲ್ಲಿ ಹಾಡಿ ಕುಣಿದು ನಲಿಯುತ್ತಾರೆ.

## ಎರವರ ಕುಣಿತ

ಕೊಡಗಿನ ಅಮ್ಮತ್ತಿ, ಪೊನ್ನಂಪೇಟೆ, ಗೋಣಿಕೊಪ್ಪ, ಶ್ರೀಮಂಗಲ ಸೇರಿದಂತೆ ವಿರಾಜಪೇಟೆಯ ಸುತ್ತಮುತ್ತಲ ಕಾಡುಗಳಲ್ಲಿ ವಾಸಿಸುವ ಬುಡಕಟ್ಟು ವರ್ಗಕ್ಕೆ ಸೇರಿದ ಎರವರು ತಮ್ಮ ದಿನನಿತ್ಯದ ದುಡಿಮೆಯ ಆಯಾಸವನ್ನು ಪರಿಹರಿಸಿಕೊಳ್ಳಲು ರಾತ್ರಿಯ ಹೊತ್ತು ತಾವು ವಾಸಿಸುವ ಗುಡಿಸಲುಗಳ ಮುಂದೆ ಬೆಂಕಿ ಹಾಕಿಕೊಂಡು ಅದರ ಸುತ್ತ ಸಾಮೂಹಿಕವಾಗಿ ಹಾಡು ಹೇಳುತ್ತಾ ಕುಣಿಯುತ್ತಾರೆ. ಕುಣಿತದಲ್ಲಿ ಇಷ್ಟೇ ಜನರಿರಬೇಕೆಂದಾಗಲಿ, ಇಂಥವರೇ ಇರಬೇಕೆಂದಾಗಲಿ ಕಟ್ಟುಪಾಡುಗಳೇನಿಲ್ಲ. ಮಕ್ಕಳಿಂದ ಹಿಡಿದು ಮುದುಕರವರೆಗೂ ಹೆಣ್ಣು ಗಂಡೆಂಬ ಭೇದವಿಲ್ಲದೆ ಎಲ್ಲರೂ ಕುಣಿತದಲ್ಲಿ ಪಾಲ್ಗೊಳ್ಳುತ್ತಾರೆ. ಆಯಾಸ ಪರಿಹಾರ ಮತ್ತು ಮನರಂಜನೆಯೇ ಎರವರ ಕುಣಿತದ ಉದ್ದೇಶ. ಎರವರ ಕುಣಿತಕ್ಕೆ ಹಿಮ್ಮೇಳ ಒದಗಿಸುವ ವಾದ್ಯಗಳು ದುಡಿ ಮತ್ತು ಚೀನೀ ವಾದ್ಯ. ದುಡಿಯು ಕೊಡವರಲ್ಲಿ ಬಳಕೆಯಲ್ಲಿರುವ



ಚರ್ಮವಾದ್ಯ. ಎರವರು ಬಳಸುವ ಚೀನೀ ವಾದ್ಯವು ಅವರಿಗಷ್ಟೇ ಮೀಸಲಾದ ವಿಶಿಷ್ಟ ಗಾಳಿ ವಾದ್ಯ. ಸಂಪೂರ್ಣವಾಗಿ ಮರದಿಂದಲೇ ತಯಾರಿಸಿದ ವಾದ್ಯವಿದು: ಇದರಿಂದ ಹೊರಡುವ ನಾದವಂತೂ ಸುಶ್ರಾವ್ಯವಾದುದು. ದುಡಿಯ ಲಯಬದ್ಧ ಬಡಿತ ಮತ್ತು ಚೀನೀ ವಾದ್ಯದ ನಾದ ಮಾಧುರ್ಯಕ್ಕೆ ಎರವರು ಉತ್ಸಾಹದಿಂದ ಕೇಕೆ ಹಾಕುತ್ತಾ ಮೈ ಬಾಗಿಸಿ ಬಳುಕುತ್ತಾ ಜೋಲಿ ಹೊಡೆಯುತ್ತಾ ಕುಣಿಯುತ್ತಾರೆ. ಒಟ್ಟಿನಲ್ಲಿ ಎರವರ ಕುಣಿತವು ಸ್ವಸಂತೋಷಕ್ಕಾಗಿ ಪ್ರದರ್ಶನಗೊಳ್ಳುವ ಕುಣಿತ. ಇಡೀ ಎರವ ಸಮುದಾಯವೇ ಕುಣಿತದಲ್ಲಿ ಪಾಲ್ಗೊಳ್ಳುವುದರಿಂದ ಪ್ರೇಕ್ಷಕ ಎಂಬುದಿರುವುದಿಲ್ಲ.


## ಕಪ್ಪೆಯಾಟ್

ಪ್ರಶಸ್ತವಾದ ವೇದಿಕೆಯ ಮಧ್ಯೆ ಹಚ್ಚಿದ ದೀಪದ ಸುತ್ತ ನಿಂತ ನಾಲ್ವರು, ಬಿಳಿಯ ಕುಪ್ಪಸ ತೊಟ್ಟು ದುಡಿ ಬಾರಿಸುತ್ತಾ ಹಾಡುತ್ತಿರುತ್ತಾರೆ. ಹಾಡು ಮತ್ತು ದುಡಿಯ ತಾಳಕ್ಕೆ ಅನುಸಾರವಾಗಿ ಕೊಡವ ಕಲಾವಿದರು ತಮ್ಮ ಸಾಂಪ್ರದಾಯಿಕ ವೇಷ ಭೂಷಣಗಳನ್ನು ಧರಿಸಿ ನಿರ್ದಿಷ್ಟ ಗತಿಯಲ್ಲಿ ಕುಣಿಯುತ್ತಾರೆ. ಕಪ್ಪೆಯಾಟದಲ್ಲಿ ಹಲವು ಪ್ರಕಾರಗಳಿವೆ. ನಮಸ್ತೆ ಆಟ್, ಚಾರಿ ಆಟ್, ಕೊರ್ತಿ ಆಟ್, ಪೀಚೆ ಕರ್ತಿ ಆಟ್, ಕೈಡವುಕ್ ಆಟ್ ಇತ್ಯಾದಿ.

ಕೊಡವರ ಸಾಂಪ್ರದಾಯಿಕ ವಾದ್ಯ ಸಂಗೀತವಾದ ವಾಲಗದೊಂದಿಗೆ ನರ್ತಿಸುವ ಈ ಕುಣಿತದಲ್ಲಿ ಡೋಲಿನ ಹಾಡನ್ನು ಮಧ್ಯೆ ಮಧ್ಯೆ ಕುಣಿಯುವವರು ಹಾಡಿದರೂ ಕೂಡ ವಾಲಗದ ಗತಿಯೇ ಅವರ ಕುಣಿತದ ಮೂಲ ಬಂಡವಾಳ. ದೇವತಾರಾಧನೆ ಈ ಕುಣಿತದ ಮೂಲ ಉದ್ದೇಶ. ಇತ್ತೀಚೆಗೆ ಕಣ್ಮರೆಯಾಗುತ್ತಿರುವ ನೃತ್ಯವಾದರೂ, ಕೊಡಗು ಜಿಲ್ಲೆಯ ದೇವಣಗೇರಿ, ಬಾಡಗ, ಬಾಲಂಗೇರಿಯ ಯುವಕರು ಈ ಕಲೆಯನ್ನು ರೂಢಿಸಿಕೊಂಡು ಬರುತ್ತಿದ್ದಾರೆ.

## ಕುಡಿಯರ ಕುಣಿತ

ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಾಸವಾಗಿರುವ ಮಲೆಕುಡಿಯರೆಂದು ಹೆಸರಾದ ಬುಡಕಟ್ಟು ಜನಾಂಗದವರ ಕುಣಿತವಿದು. ಕೊಡಗಿನ ಕುಡಿಯ ಗಂಡಸರು ಹಾಗೂ ಹೆಂಗಸರೂ ಸೇರಿದಂತೆ ಗುಂಪಾಗಿ ಪ್ರದರ್ಶಿಸುತ್ತಾರೆ. ಕೊಡವರ ರೀತಿಯಲ್ಲಿಯೇ ಬಿಳಿಯ ನಿಲುವಂಗಿ, ಪಾಯಿಜಾಮ, ನಡುವಿಗೆ ವಸ್ತ್ರ, ತಲೆಗೆ ಪೇಟ ಧರಿಸಿದ ಗಂಡಸರು ಮತ್ತು ಕೊಡವ ಮಹಿಳೆಯರಂತೆ



ವೇಷಭೂಷಣಗಳನ್ನು ಧರಿಸಿದ ಕುಡಿಯ ಹೆಂಗಸರು ತಮ್ಮ ಎರಡೂ ತೋಳುಗಳನ್ನು ಎತ್ತಿ ಕೈಗಳನ್ನು ಬಾಗಿಸುತ್ತಾ ಬಗ್ಗಿ, ಎದ್ದು, ಹಿಂದೆ ಮುಂದೆ ತಿರುಗುತ್ತಾ ಆಕರ್ಷಕವಾಗಿ ನರ್ತಿಸುತ್ತಾರೆ. ಈ ಕುಣಿತಕ್ಕೆ ಡೋಲು ಹಿಮ್ಮೇಳದ ವಾದ್ಯ. ಕೊಡವರ ಕೊಂಬಾಟ್, ಪೀಲಿಯಾಟಗಳಂತೆಯೇ ಕುಡಿಯರ ಕುಣಿತವು ಸಹ ನಿಧಾನವಾಗಿ ಪ್ರಾರಂಭವಾಗಿ ಉತ್ಕರ್ಷವನ್ನು ಎಟುಕಿಸಿಕೊಳ್ಳುತ್ತದೆ.

## ಕುರುಬಾಟ್

ಕೊಡಗಿನ ಅರಣ್ಯಗಳಲ್ಲಿ ವಾಸಿಸುವ ಕಾಡು ಕುರುಬರು ಪ್ರದರ್ಶಿಸುವ ಕುಣಿತವೇ ಕುರುಬಾಟ್. ತಮ್ಮದೇ ಆದ ಕನ್ನಡವೂ ಅಲ್ಲದ, ಕೊಡವ ಭಾಷೆಯೂ ಅಲ್ಲದ ಹಳೆಗನ್ನಡವನ್ನು ಹೋಲುವ ಭಾಷೆಯಲ್ಲಿ ಹಾಡುತ್ತಾ ವಿಶಿಷ್ಟ ರೀತಿಯಲ್ಲಿ ಬೆಂಕಿಯ ಸುತ್ತ ಕೋಲು

ಹೊಡೆಯುತ್ತಾ ಕುಣಿಯುತ್ತಾರೆ. ಕೈಯಲ್ಲಿ ಹಿಡಿದ ಸುಮಾರು ಒಂದು ಅಡಿ ಉದ್ದದ ಕೋಲನ್ನು ಅತಿ ಕುಶಲತೆಯಿಂದ ತಿರುಗಿಸುತ್ತಾ ಕಾಡಿನ ದೇವತೆಯನ್ನು ಕುರಿತು ಹಾಡುತ್ತಾ ಕುಣಿಯುತ್ತಾರೆ. ಹಿಮ್ಮೇಳಕ್ಕೆ ಯಾವುದೇ ವಾದ್ಯಗಳಿಲ್ಲದಿದ್ದರೂ ಹಾಡನ್ನು ಅನುಸರಿಸಿ ಅತಿ ವೇಗವಾಗಿ ಶಿಸ್ತಿಗಿಂತ ಕುಣಿಯುತ್ತಾರೆ. ತಿತಿಮತಿ ಮತ್ತು ಕಾನೂರಿನ ಕಾಡುಗಳಲ್ಲಿ ವಾಸಿಸುವ ಕುರುಬರು ಈ ಕುಣಿತವನ್ನು ಪ್ರದರ್ಶಿಸುತ್ತಾರೆ.

## ಕೈತಲೆ ಆಟ್

ಭದ್ರಕಾಳಿ ಆರಾಧನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ 'ಕೈತಲೆ ಆಟ್' ಕೊಡಗು ಜಿಲ್ಲೆಗೆ ಮೀಸಲಾದ ವಿಶಿಷ್ಟ ಕಲಾ ಪ್ರಕಾರ. ಮಹಾಕಾಳಿ ದೇವಸ್ಥಾನದಲ್ಲಿ ಮಾತ್ರವೇ ಪ್ರದರ್ಶನಗೊಳ್ಳುವ 'ಕೈತಲೆ ಆಟ್'ನಲ್ಲಿ ಪುರುಷರಷ್ಟೇ ಪಾಲ್ಗೊಳ್ಳುವರು.

'ಕೈತಲೆ ಆಟ್' ಪ್ರದರ್ಶನಕ್ಕೆ ಇಷ್ಟೇ ಜನರಿರಬೇಕೆಂಬ ನಿಯಮವೇನಿಲ್ಲ. ಯಾರು ಬೇಕಾದರೂ ಈ ಕುಣಿತದಲ್ಲಿ ಪಾಲ್ಗೊಳ್ಳಬಹುದು. ಆದರೆ ಅವರು ಕಾಳಿಯ ಆರಾಧಕರಾಗಿರಬೇಕಷ್ಟೆ. ಬಿಳಿಯ ಕುಪ್ಪಸ ತೊಟ್ಟ ದಟ್ಟಿ ಉಟ್ಟು, ತಲೆಗೆ ರುಮಾಲು ಧರಿಸಿ ಕೈಯಲ್ಲಿ ಚೌರಿ ಹಿಡಿದು ಕುಣಿಯುವ ಕಲಾವಿದರಿಗೆ ಹಿಮ್ಮೇಳದ ದನಿಯನ್ನು ನೀಡುವ ಪರೆ, ಜಾಗಟೆಯಕಾರದ ಕಂಚಿನ ತಟ್ಟೆ ಮತ್ತು ಡೋಲು. ಜಾಗಟೆಯನ್ನು ಸುಮಾರು ಒಂದೂವರೆ ಅಡಿ ಉದ್ದದ ಮರದ ತುಂಡಿನಿಂದ ಬಡಿದಾಗ ವೈವಿಧ್ಯಮಯ ನಾದ ಹೊರಹೊಮ್ಮುತ್ತದೆ. ಕುಣಿತದಲ್ಲಿಯು ಆರೇಳು ಬಗೆಗಳಿವೆ. ಮಾರ್ಚ್ ತಿಂಗಳ ಮಧ್ಯಭಾಗದಲ್ಲಿ ಕೊಡಗಿನಲ್ಲಿರುವ ಭದ್ರಕಾಳಿ ದೇವಸ್ಥಾನಗಳಲ್ಲಿ ಹಗಲಿನ ವೇಳೆ ನಡೆಯುವ ಈ ಕುಣಿತವು ಭಯ-ಭಕ್ತಿಗಳೊಂದಿಗೆ ಮನರಂಜನೆಯನ್ನು ಒದಗಿಸುತ್ತದೆ.

# ಕೊರ್ತಿ ಆಟ

ಕೊಡವರ ತೋಟಗಳಲ್ಲಿ ದುಡಿಯಲು ಬಂದ ತಮಿಳುನಾಡಿನ ಜನ ತಮ್ಮೊಂದಿಗೆ ಕೊಡಗಿಗೆ ಕರೆತಂದ ಕಲೆ ಕೊರ್ತಿ ಆಟ. ಸ್ವಚ್ಛಂದವಾದ ಮನರಂಜನಾ ಕಲೆ. ಕೊರ್ತಿ ಆಟದಲ್ಲಿ ಐದಾರು ಮಂದಿ ಕಲಾವಿದರಿರುತ್ತಾರೆ. ತಲೆಗೆ ಬಟ್ಟೆಯ ಚಿಂದಿಗಳನ್ನು ಹೆಣೆದು ಮಾಲೆಯಾಗಿ ಕಟ್ಟಿದ ಪೇಟ, ಕೊರಳಿಗೆ ಮಣಿಸರ, ಮುಖ ಮತ್ತು ಮೈಗೆಲ್ಲಾ ಕಪ್ಪು-ಕೆಂಪು ಬಣ್ಣ ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾರೆ. ಕೊರ್ತಿ ಕುಣಿತಕ್ಕೆ ಹಿಮ್ಮೇಳದ ವಾದ್ಯ ಖಾಲಿ ಡಬ್ಬಗಳು. ಕುಣಿತದಲ್ಲಿ ಇಬ್ಬರು ಹೆಣ್ಣು ವೇಷಧಾರಿಗಳು.

ಹಬ್ಬ ಹರಿದಿನಗಳಲ್ಲಿ ಸಂತೋಷ ಸಮಾರಂಭಗಳಲ್ಲಿ ಕೈಯಲ್ಲಿ ಹಿಡಿದ ಖಾಲಿ ಡಬ್ಬಗಳನ್ನು ಡಣ-ಡಣ ಸದ್ದು ಬರುವಂತೆ ಬಾರಿಸುತ್ತಾ, ಅದರ ಗತ್ತಿಗೆ ತಕ್ಕಂತೆ ಕುಣಿಯುತ್ತಾರೆ. ಹೆಣ್ಣು ವೇಷಧಾರಿಗಳು ಮತ್ತು ಗಂಡು ವೇಷಧಾರಿಗಳು ಜತೆಗೂಡಿ ಹಕ್ಕಿಪಿಕ್ಕಿಯವರ ಆಟಗಳನ್ನು ಅಭಿನಯಿಸುತ್ತಾರೆ. ಮನೆಗಳ ಬಳಿ ಹೋಗಿ ಅವರ ಅಂಗಳದಲ್ಲಿ ಕುಣಿದು ಮನೆಯವರಿಂದ ಸಂಭಾವನೆಯ ರೂಪದಲ್ಲಿ ದವಸಧಾನ್ಯ ಪಡೆಯುತ್ತಾರೆ.

# ಕೊಂಬಾಟ್

ಕೊಡಗು ಜಿಲ್ಲೆಯಲಿ ಕಂಡುಬರುವ ವೈವಿಧ್ಯಮಯ ಜನಪದ ಕಲೆಗಳಲ್ಲಿ 'ಕೊಂಬಾಟ್' ವಿಶಿಷ್ಟವಾದ ನರ್ತನ ಪ್ರಕಾರ. ದೇವತಾರಾಧನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಈ ಕುಣಿತವನ್ನು ಹಬ್ಬ ಹುಣ್ಣಿಮೆಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಪ್ರದರ್ಶಿಸುತ್ತಾರೆ. ಕೊಡಗಿನ ಸಾಂಪ್ರದಾಯಿಕ ವೇಷಭೂಷಣಗಳನ್ನು

ಧರಿಸಿದ ಕಲಾವಿದರು ಕೈಯಲ್ಲಿ ಜಿಂಕೆಯ ಕೊಂಬುಗಳನ್ನು ಹಿಡಿದು ಇಲ್ಲವೆ ತಲೆಯ ಮೇಲೆ ಸಾರಂಗದ ಕೊಂಬುಗಳನ್ನು ಕಟ್ಟಿಕೊಂಡು ಅಥವಾ ಕೈಯಲ್ಲಿ ನವಿಲುಗರಿ ತೆಂಡೆಗಳನ್ನು ಹಿಡಿದು ಕುಣಿಯುತ್ತಾರೆ. ಕುಣಿತದಲ್ಲಿ ಇಷ್ಟೇ ಜನ ಕಲಾವಿದರಿರಬೇಕೆಂಬ ನಿಯಮವೇನಿಲ್ಲ. ಕಲಾವಿದರು ಎರಡು ಸಾಲುಗಳಲ್ಲಿ ಪರಸ್ಪರ ಅಭಿಮುಖವಾಗಿ ನಿಂತು ಸುತ್ತು ಸಾಲಿನಲ್ಲಿ ಕುಣಿಯುತ್ತಾರೆ. ಕುಣಿಯುವಾಗ ಜಿಂಕೆಯ ಕೊಂಬು ಇಲ್ಲವೆ ಪೀಲಿ ಹಿಡಿದ ಕೈಗಳನ್ನು ನಾನಾ ವಿನ್ಯಾಸಗಳಲ್ಲಿ ಚಲಿಸುತ್ತಾರೆ.



ಭಸ್ಮಾಸುರನನ್ನು ಸಂಹಾರ ಮಾಡಲು ವಿಷ್ಣು ಅವತಾರ ಎತ್ತಿದಾಗ ಮಾಡಿದ ನಾನಾ ಬಗೆಯ ನೃತ್ಯಗಳಲ್ಲಿ, ಒಂದು ಬಾರಿ ಕೊಂಬನ್ನು ಹಿಡಿದು ಮತ್ತೊಂದು ಬಾರಿ ಪೀಲಿಯನ್ನು ಹಿಡಿದು ನರ್ತನ ಮಾಡಿದನು. ಅದರ ಪ್ರತಿರೂಪವಾಗಿ ಕೊಂಬಾಟ್ ಕುಣಿತವನ್ನು ಪ್ರದರ್ಶಿಸಲಾಗುವುದೆಂದು ಕೊಡವರು ನಂಬುತ್ತಾರೆ. ಉತ್ತರ ಕೊಡಗಿನ

ಪಾರಾಣೆ ಮತ್ತು ಕೋಳಂಚೇರಿ ಸುತ್ತಮುತ್ತ ಈ ಕುಣಿತವು ಕಂಡುಬರುತ್ತದೆ. ದುಡಿ, ಡೋಲು, ಕೊಂಬು, ಪರೆ, ತಾಳ ವಾದ್ಯಗಳು ಹಿಮ್ಮೇಳದ ವಾದ್ಯಗಳು.

## ಕೊಂಬುಕೊಟ್ಟ ವಾಲಗ

ಕೊಂಬುಕೊಟ್ಟ ವಾಲಗವು ನಮ್ಮ ಚಿಟ್‌ಮೇಳ, ಕರಡೆ ಮಜಲಿನಂತೆ ವಾದ್ಯ ಮೇಳ. ಈ ಮೇಳದಲ್ಲಿ ಕೊಂಬು, ಮೌರಿ, ಶ್ರುತಿ, ತಾಳ, ಪರೆ, ಡೋಲುಗಳಿರುತ್ತವೆ. ಕೊಡವರ ಹಬ್ಬಹರಿದಿನಗಳಲ್ಲಿ ಜಾತ್ರೆ, ಉತ್ಸವಗಳಲ್ಲಿ, ದೇವಸ್ಥಾನಗಳ ಮುಂದೆ ಈ ವಾದ್ಯಮೇಳವನ್ನು ಪ್ರದರ್ಶಿಸುತ್ತಾರೆ. ಕೊಂಬು ಕೊಟ್ಟ ವಾಲಗದಲ್ಲಿ ಸಾಮಾನ್ಯವಾಗಿ ಏಳು ಜನರಿದ್ದು ಒಬ್ಬೊಬ್ಬರೂ ಒಂದೊಂದು ವಾದ್ಯವನ್ನು ನುಡಿಸುತ್ತಾರೆ. ಇದಕ್ಕೆ ಸಪ್ತ ವಾದ್ಯಮೇಳ ಎಂದೂ ಕರೆಯುವುದುಂಟು. ಕಲಾವಿದರು ತಲೆಗೆ ಪೇಟ, ಅಂಗಿ, ಅಂಗಿಯ ಮೇಲೊಂದು ಕರಿಯ ಕೋಟು, ದಟ್ಟಿ ಪಂಚೆ, ಹೆಗಲ ಮೇಲೊಂದು ಶಲ್ಯ, ಸೊಂಟಕ್ಕೆ ರೇಷ್ಮೆ ವಸ್ತ್ರದ ನಡುಕಟ್ಟು ಧರಿಸಿರುತ್ತಾರೆ.

ಕೊಂಬುಕೊಟ್ಟ ವಾಲಗದ ಕಲಾವಿದರು ಅನಕ್ಷರಸ್ಥರಾದರೂ ಸಂಗೀತ ಜ್ಞಾನವನ್ನುಳವರು. ಯಾವ ಯಾವ ಸಂದರ್ಭಗಳಿಗೆ ಎಂತಹ ರಾಗಗಳನ್ನು ನುಡಿಸಬೇಕೆಂಬ ಪರಿಜ್ಞಾನವನ್ನು ಹೊಂದಿರುವವರು. ವೈವಿಧ್ಯಮಯ ರಾಗ–ಗತಿಗಳ ಸರಕು ಇವರಲ್ಲಿದೆ. ಕೊಂಬುಕೊಟ್ಟ ವಾಲಗದ ರಾಗ ಗತಿಗೆ ಕೊಡವರು ಗತ್ತಿನ ಹೆಜ್ಜೆಗಳನ್ನು ಹಾಕುತ್ತಾ ಕುಣಿತಗಳನ್ನು ನಡೆಸುತ್ತಾರೆ. ಈ ವಾದ್ಯತಂಡವಿಲ್ಲದೆ ಕೊಡಗಿನ ಬಹುತೇಕ ಯಾವ ಜನಪದ ಕಲೆ, ಪ್ರದರ್ಶನ, ಶುಭ – ಅಶುಭ ಕಾರ್ಯಕ್ರಮಗಳೂ ನಡೆಯುವುದಿಲ್ಲ. ಅಮ್ಮತ್ತಿ ಮತ್ತು ಹುದಿಕೇರಿಗಳಲ್ಲಿರುವ ತಂಡಗಳು ಹೆಸರಾದವುಗಳು.

# ಜೋಯಿಪಾಟ್

ಹುತ್ತರಿ ಹಬ್ಬದ ಮಾರನೆಯ ದಿನದಂದು ಕೊಡವರು ಪ್ರದರ್ಶಿಸುವ ಜೋಯಿಪಾಟ್ ಕುಣಿತವು ಭೂತ–ವರ್ತಮಾನ–ಭವಿಷ್ಯದ ಸಂಗತಿಗಳನ್ನು ಅಭಿವ್ಯಕ್ತಿಸುವ ವಿಶಿಷ್ಟ ಕಲಾ ಪ್ರಕಾರ. ಬಯಲುಸೀಮೆಯ ವೀರಗಾಸೆ ಮತ್ತು ವೀರಭದ್ರನ ಕುಣಿತದ ಹಿನ್ನೆಲೆಯೇ ಜೋಯಿಪಾಟ್ ಕುಣಿತಕ್ಕೆ ಇದೆ. ದಕ್ಷಬ್ರಹ್ಮನ ಯಜ್ಞಕುಂಡಕ್ಕೆ ಪಾರ್ವತಿಯು ಬಲಿಯಾದ ವಿಚಾರ ತಿಳಿದ ಪರಶಿವನು ಉಗ್ರ ಕೋಪದಿಂದ ತನ್ನ ಜಟೆಯನ್ನು ಕಿತ್ತು ನೆಲಕ್ಕೆ ಅಪ್ಪಳಿಸಿದಾಗ ಹುಟ್ಟಿದ ವೀರಭದ್ರನು ದಕ್ಷಯಜ್ಞವನ್ನು ಧ್ವಂಸ ಮಾಡಿದನು. ಈ ಹಿನ್ನೆಲೆಯಲ್ಲಿ ಕುಣಿಯುವ ಜೋಯಿಪಾಟ್ ಕುಣಿತದ ಹಾಡುಗಳೇ ಜ್ಯೋತಿಷ್ಯಪಾಟ್.

ಜೋಯಿಪಾಟ್ ಕುಣಿತದಲ್ಲಿ ಹತ್ತು ಮಂದಿ ಕಲಾವಿದರಿರುತ್ತಾರೆ. ನಾಲ್ಕು ಮಂದಿ ಕಲಾವಿದರು ಕೊಡವರ ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿರುತ್ತಾರೆ. ಉಳಿದ ಆರು ಮಂದಿ ಕಲಾವಿದರು ವಿವಿಧ ಬಗೆಯ ವೇಷಗಳನ್ನು ಧರಿಸಿರುತ್ತಾರೆ. ಒಬ್ಬ ಹೆಣ್ಣು ವೇಷ ಧರಿಸಿದರೆ, ಮತ್ತೊಬ್ಬ ಬಿಳಿಯ ಕುಪ್ಪಸ ತೊಟ್ಟು ಒಂದು ಕೈಯಲ್ಲಿ ಬೆತ್ತ ಮತ್ತೊಂದು ಕೈಯಲ್ಲಿ ಪರಿಯ ಹಿಡಿದ ಕುರುಡನ ವೇಷ, ಇನ್ನೊಬ್ಬ ಮೈಗೆ ಚಿಂದಿ ಬಟ್ಟೆಗಳನ್ನು ಉಟ್ಟು, ಬಾಲ ಕಟ್ಟಿಕೊಂಡ ಮಂಗನ ವೇಷ, ಮರದ ಕತ್ತಿಯನ್ನು ಕೈಯಲ್ಲಿ ಹಿಡಿದ ಕೊರಮನ ವೇಷ, ಬಾಳೆಯ ತರಗುಗಳನ್ನು ಧರಿಸಿ ಕೊಕ್ಕರೆಗಳಂತೆ ವೇಷ ಹಾಕುವವರು ಹೀಗೆ ವೈವಿಧ್ಯಮಯ ವೇಷಧಾರಿಗಳಿರುತ್ತಾರೆ. ಇವರೆಲ್ಲರೂ ಪರೆ ಇಲ್ಲವೆ ಮೇದರ ಡೋಲು, ಜಾಗಟೆಯಾಕಾರದ ಕಂಚಿನ ತಟ್ಟೆ, ದುಡಿ ವಾದ್ಯಗಳ ಹಿಮ್ಮೇಳದ ಗತ್ತಿಗೆ ತಕ್ಕಂತೆ ಕುಣಿಯುತ್ತಾರೆ.

## ಡೋಳುಪಾಟ್

ಕೊಡವರಲ್ಲಿ ಭಗವತಿ ಮತ್ತು ಭದ್ರಕಾಳಿ ಹಬ್ಬದ ಸಂದರ್ಭಗಳಲ್ಲಿ ಪ್ರದರ್ಶಿಸುವ ಡೋಳುಪಾಟ್ ಪ್ರಧಾನವಾಗಿ ಗಾಯನ ಕಲೆ. ಕೊಡವರು ತಮ್ಮ ಸಾಂಪ್ರದಾಯಿಕ ವೇಷಗಳನ್ನು ಧರಿಸಿ ಸೊಂಟಕ್ಕೆ ಕಟ್ಟಿಕೊಂಡ ಸಣ್ಣ ಡೋಲು ಇಲ್ಲವೆ ದುಡಿಗಳನ್ನು ಬಾರಿಸಿಕೊಂಡು ಹಾಡಿದರೆ, ಹರಿಜನರು ತಮ್ಮ ದಿನನಿತ್ಯದ ಉಡುಪನ್ನೇ ಧರಿಸಿ ಹಾಡುತ್ತಾರೆ. ಹಾಡಿಗೆ ಡೋಲು ಮತ್ತು ತಾಳಗಳು ಹಿಮ್ಮೇಳ ನೀಡುತ್ತವೆ.

ಡೋಳುಪಾಟ್‌ನಲ್ಲಿ ಉತ್ತಮ ಕಂಠ ಇರುವ ಎಷ್ಟು ಜನ ಕಲಾವಿದರು ಬೇಕಾದರೂ ಪಾಲ್ಗೊಳ್ಳಬಹುದು. ದೇವರ ಪೂಜಾದಿ ಸಂದರ್ಭಗಳಲ್ಲಿ, ನಿರ್ದಿಷ್ಟ ಸ್ಥಳಗಳಲ್ಲಿ ಈ ಗಾಯನ ಕಲೆ ಜರುಗುತ್ತದೆ. ಸಾಮಾಜಿಕ ಬದುಕು ಹಸನಾಗಿರಬೇಕೆನ್ನುವುದು 'ಡೋಳುಪಾಟ್' ನ ಮೂಲ ಆಶಯ. ಡೋಳುಪಾಟ್‌ನಲ್ಲಿ ಮನೆತನಗಳ ಇತಿಹಾಸವನ್ನು ಹೇಳುತ್ತಾರೆ. ಒಟ್ಟಿನಲ್ಲಿ ಈ ಗಾಯನ ಕಲೆಯು ಜನರಿಗೆ ಮನರಂಜನೆಯನ್ನು ಒದಗಿಸುವುದರೊಂದಿಗೆ ಉತ್ತಮ ಜೀವನ ನೀತಿಯನ್ನು ಹೇಳಿಕೊಡುತ್ತದೆ.

## ದಪ್ಪು ಕುಣಿತ

ಜನಪದ ವಾದ್ಯವಾದ ದಪ್ಪುವಿನ ತಾಳಕ್ಕೆ ಅನುಸಾರವಾಗಿ ಕುಣಿಯುವ ಕುಣಿತವನ್ನು ದಪ್ಪು ಕುಣಿತ ಎಂದು ಕರೆಯುತ್ತಾರೆ. ಚರ್ಮದಿಂದ ಮಾಡಲ್ಪಡುವ ದಪ್ಪು ವಾದ್ಯವು ಆಕಾರದಲ್ಲಿ ದಮ್ಮಡಿಗಿಂತ ದೊಡ್ಡದಿರುತ್ತದೆ. ಕುಂಬಳಿ ಮರದಿಂದ ಮಾಡಲ್ಪಟ್ಟ ಹೊಳವಿನ ಒಂದು ಬಾಯಿಗೆ ಹದ ಮಾಡಿದ ಆಡಿನ ಚರ್ಮವನ್ನು ಬಿಗಿದು ದಪ್ಪು ವಾದ್ಯವನ್ನು ಸಿದ್ಧಗೊಳಿಸುತ್ತಾರೆ. ಕಲಾವಿದರೆಲ್ಲರೂ ಈ ವಾದ್ಯವನ್ನು ಕೈಯಲ್ಲಿ

ಹಿಡಿದು ಬಾರಿಸುತ್ತಾ ಅದರ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ.

ದಪ್ಪು ಕುಣಿತವು ಕೊಡಗು ಜಿಲ್ಲೆಯ ಕೊಂಡಂಗೇರಿ, ಎಮ್ಮೆಯಾಡು ಮುಂತಾದ ಪ್ರದೇಶಗಳಲ್ಲಿರುವ ಕೊಡವ ಮಾಪಿಳ್ಳೆ ಜನಾಂಗದವರಲ್ಲಿ ಕಂಡು ಬರುತ್ತದೆ. ಇವರು ಹಿಂದೊಮ್ಮೆ ಕೊಡವರಾಗಿದ್ದು, ಟಿಪ್ಪುಸುಲ್ತಾನನ ಕಾಲದಲ್ಲಿ ಮತಾಂತರಗೊಂಡರೂ, ಕೊಡವ ಸಂಪ್ರದಾಯವನ್ನು ಉಳಿಸಿಕೊಂಡಿರುವ, ಆದರೆ ಮಲಯಾಳಿ ಭಾಷೆಯನ್ನು ಮಾತನಾಡುವ ಮುಸ್ಲಿಂ ಜನಾಂಗಕ್ಕೆ ಸೇರಿದ ಕೊಡವ ಮಾಪಿಳ್ಳೆಗಳು. ಮಾಪಿಳ್ಳೆಯವರು ತಮ್ಮ ಆಚರಣೆಗಳಿಗೆ ಸಂಬಂಧಿಸಿದಂತೆ ಹಬ್ಬ ಮುಂತಾದ ಸಂದರ್ಭಗಳಲ್ಲಿ ಈ ಕುಣಿತವನ್ನು ದೇವಸ್ಥಾನ ಹಾಗೂ ಮಸೀದಿಯ ಬಳಿ ಪ್ರದರ್ಶಿಸುತ್ತಾರೆ. ಕೆಲವೊಮ್ಮೆ ಸಾರ್ವಜನಿಕರ ಒತ್ತಾಯದ ಮೇರೆಗೆ ಯಾವ ಕಡೆಯಾದರೂ ಸರಿ ಈ ಕುಣಿತವನ್ನು ಪ್ರದರ್ಶಿಸುವುದು ಕಂಡು ಬರುತ್ತದೆ. ಈ ಕುಣಿತದಲ್ಲಿ ಕನಿಷ್ಠವೆಂದರೆ ೬ ರಿಂದ ೩೦ ಮಂದಿಯವರೆಗೆ ಕಲಾವಿದರಿರುತ್ತಾರೆ. ನಿತ್ಯ ಉಡುಪುಗಳಾದ ಟೋಪಿ, ಶರಟು ಹಾಗೂ ಸುತ್ತು ಇಜಾರವನ್ನು ಧರಿಸಿ ಕೈಯಲ್ಲಿ ದಪ್ಪು ವಾದ್ಯವನ್ನು ಹಿಡಿದಿರುತ್ತಾರೆ. ಕೈಯಲ್ಲಿನ ದಪ್ಪುವನ್ನು ತಟ್ಟುತ್ತಾ, ತಮ್ಮ ದೇವರನ್ನು ಕುರಿತು ಹಾಡುತ್ತಾ ವಿಶಿಷ್ಟ ಹೆಜ್ಜೆಗಳಲ್ಲಿ ಕುಣಿಯುತ್ತಾರೆ. ಕೈಯಲ್ಲಿನ ದಪ್ಪುವನ್ನು ತಲೆಯ ಮೇಲಿನಿಂದ ತಂದು ಮೊಣಕೈಗೆ ಘಟ್ಟಿಸಿ ನಂತರ ಮುಂಗೈಯಿಂದ ಹೊಡೆದು ಒಮ್ಮೊಮ್ಮೆ ವೇಗವಾಗಿ, ಮಗುದೊಮ್ಮೆ ನಿಧಾನವಾಗಿ ವರ್ತುಲಾಕಾರದಲ್ಲಿ ಕುಣಿಯುತ್ತಾರೆ. ಈ ಕುಣಿತಕ್ಕೆ 'ದಪ್ಪುರಾವತಿ' 'ದಪ್ಪು ಆಟ' ಎಂದೂ ಹೆಸರಿದೆ.

## ಪರಿಯಕಳಿ

ಇದೊಂದು ಬಗೆಯ ಯುದ್ಧನೃತ್ಯ. ಹಿಂದೆ ಗ್ರಾಮಗಳ ಜನರು ಸಮಬಲರಾಗಿ ನಿಂತು ಈ ಕುಣಿತದಲ್ಲಿ ಕಾದಾಡುತ್ತಿದ್ದರಂತೆ. ದಿನಗಳೆದಂತೆ ವೈಯಕ್ತಿಕ ದ್ವೇಷಾಸೂಯೆಗಳು ಹೆಚ್ಚಿ, ಈ ಕುಣಿತದ ಅವಕಾಶಗಳನ್ನು ಬಳಸಿಕೊಂಡು ಎದುರಾಳಿಗಳನ್ನು ಸದೆಬಡಿಯುವುದು ಹೆಚ್ಚಾಯಿತು. ಆಗ ನಿಜವಾದ ನೃತ್ಯದ ಅವಕಾಶಗಳನ್ನು ಬದಿಗಿರಿಸಿ, ಕೆಲವು ನಿಬಂಧನೆಗಳ ಮೇಲೆ ಕೇವಲ ಅಣಕದ ಸಂಕೇತವಾಗಿ ಪರಿಯಕಳಿಯನ್ನು ಪ್ರದರ್ಶಿಸುತ್ತಾ ಬಂದಿರುತ್ತಾರೆ.

ಹುತ್ತರಿ ಕೋಲಾಟದಲ್ಲಿ ಬಳಸುವಂತಹ ಎರಡು ಬೆತ್ತದ ಕೋಲುಗಳನ್ನು ಪರಿಯಕಳಿಯಲ್ಲಿ ಬಳಸಲಾಗುವುದು. ಮೊದಲು ಕೋಲುಗಳನ್ನು ಹಿಡಿದ ಕಲಾವಿದರು ಕೊಂಬುಕೊಟ್ಟು ವಾಲಗ ವಾದ್ಯಗಳ ಹಿಮ್ಮೇಳದೊಂದಿಗೆ ಚನ್ನಾಗಿ ಕುಣಿಯುತ್ತಾರೆ. ಕುಣಿತ ನಿಲ್ಲಿಸಬೇಕೆಂದು ನಿಶ್ಚಯವಾದ ಕೂಡಲೇ ಮೇದ ಪರೆ ಹೊಡೆಯುತ್ತಾನೆ. ಕಲಾವಿದರೆಲ್ಲರೂ ಗುಂಪಾಗಿ ಕೈಯಲ್ಲಿ ಹಿಡಿದ ಕೋಲುಗಳಿಂದ ಅಣಕದ ಯುದ್ಧ ಆರಂಭಿಸುತ್ತಾರೆ. ಒಂದು ಕೋಲನ್ನು ಎದುರಾಳಿಯ ಪೆಟ್ಟು ತಡೆಯುವುದಕ್ಕೆ, ಮತ್ತೊಂದು ಕೋಲನ್ನು ಎದುರಾಳಿಯ ಮೇಲೆ ಆಕ್ರಮಣ ಮಾಡುವುದಕ್ಕೆ ಬಳಸುತ್ತಾರೆ. ಪರಿಯಕಳಿಯಲ್ಲಿ ತಟ್ಟೆ ಪರಿಯಕಳಿಯು ರೋಚಕವಾದ ಕುಣಿತ.

ಪರಿಯಕಳಿಯಲ್ಲಿ ಸಮೂಹವು ಭಾಗವಹಿಸಿದರೆ, ತಟ್ಟೆ ಪರಿಯಕಳಿಯಲ್ಲಿ ಏಕಕಾಲಕ್ಕೆ ಇಬ್ಬರು ಮಾತ್ರ ಭಾಗವಹಿಸುತ್ತಾರೆ. ಬೆತ್ತಗಳ ಬದಲಾಗಿ, ಬೆತ್ತದಿಂದ ಹೆಣೆದ ಗುರಾಣಿಯಾಕಾರದ

ತಟ್ಟೆಯನ್ನು ಮತ್ತು ಸುಮಾರು ಆರು ಅಡಿ ಉದ್ದದ ಬೆತ್ತದ ಕೋಲನ್ನು ಬಳಸುತ್ತಾರೆ. ಈ ತಟ್ಟೆ ಮತ್ತು ಕೋಲುಗಳು ಗುರಾಣಿ ಮತ್ತು ಖಡ್ಗಗಳನ್ನು ಪ್ರತಿನಿಧಿಸುತ್ತವೆ. ಎಡಗೈಯಲ್ಲಿ ತಟ್ಟೆ, ಬಲಗೈಯಲ್ಲಿ ಕೋಲು ಹಿಡಿದ ಯುವಕ ಮೈದಾನಕ್ಕಿಳಿದು ತನ್ನ ಸಮವಯಸ್ಕರನ್ನು ದ್ವಂದ್ವಯುದ್ಧಕ್ಕೆ ಕರೆಯುತ್ತಾನೆ. "ನಾ ಬಾಳ್, ನೀ ಬಾಳ್, ಏಡಕೊದೆ ಇಳಿವ ಚಂಙ್ಣಾದಿ ಬಾಳ್, ಇಗ್ಗುತಪ್ಪ ಬಾಳ್, ಬಯತೂರಪ್ಪ ಬಾಳ್, ಬಾಳ್ ಬಾಳಿರೆ ಬಾಳ್ (ನಾನೂ ಬಾಳುತ್ತೇನೆ. ನೀನೂ ಬಾಳು, ನನ್ನೊಡನೆ ಕಣಕ್ಕಿಳಿದ ಸ್ನೇಹಿತರೂ ಬಾಳಲಿ, ಇಗ್ಗುತಪ್ಪ ಬೈತೂರಪ್ಪ ದೇವರುಗಳೂ ಬಾಳಲಿ, ಎಲ್ಲರೂ ಬಾಳಲಿ)" ಎಂದು ಹಾಡುತ್ತಾ ವೀರ ನೃತ್ಯ ಮಾಡುತ್ತಾ ಕರೆಯುತ್ತಾನೆ. ಹೀಗೆ ಕರೆದ ಯುವಕನ ಜತೆ ಸೆಣ ಸಾಡಲು ಕಣಕ್ಕೆ ಇಳಿವವನೂ ಸಹ ಅದೇ ರೀತಿ ಹಾಡುತ್ತಾ ಕಾದಾಡಲು ಪ್ರಾರಂಭಿಸುತ್ತಾರೆ.

ಇಬ್ಬರೂ ಹಿಮ್ಮೇಳದ ವಾದ್ಯಗಳ ಅಬ್ಬರಕ್ಕನುಗುಣವಾಗಿ ಕುಣಿಯುತ್ತಾ ಒಬ್ಬರನ್ನೊಬ್ಬರು ಎದುರಿಸಿ ಹೋರಾಡುತ್ತಾರೆ. ಒಬ್ಬರೊಬ್ಬರ ಕಾಲಿಗೆ ಹೊಡೆಯುವ, ಅದನ್ನು ಚಾಕಚಕ್ಯತೆಯಿಂದ ತಪ್ಪಿಸಿಕೊಳ್ಳುವ, ಹಾರಿ ಹೊಡೆಯಲು ಯತ್ನಿಸುವ, ಕುಪ್ಪಳಿಸುವ, ಜಿಗಿಯುವ ಹೀಗೆ ಕತ್ತಿ ಹೋರಾಟದಲ್ಲಿ ನಡೆಸುವ ಎಲ್ಲ ಬಗೆಯ ವರಸೆಗಳನ್ನು ಪರಿಯಕಳಿಯಲ್ಲಿ ಕಾಣಬಹುದು. ಕೆಲವು ವೇಳೆ ಇಬ್ಬರೂ ಸಮ ಶಕ್ತಿವಂತರಾಗಿದ್ದಾಗ ಹೋರಾಟವು ಭೀಕರ ರೂಪ ಪಡೆಯುವುದುಂಟು. ಅಂತಹ ಸಂದರ್ಭದಲ್ಲಿ ಪ್ರೇಕ್ಷಕರು ಮಧ್ಯ ಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸುತ್ತಾರೆ. ಪರಿಯಕಳಿ

ಹೋರಾಟದಲ್ಲಿ ಯಾರೂ ಸೊಂಟದ ಮೇಲುಭಾಗಕ್ಕೆ ಹೊಡೆಯಕೂಡದು, ಹಾಗೇನಾದರೂ ಹೊಡೆದಲ್ಲಿ ದಂಡ ತೆರಬೇಕಾಗುತ್ತದೆ. ಹೋರಾಟದ ಕೊನೆಯಲ್ಲಿ ಸ್ಪರ್ಧಿಗಳಿಬ್ಬರೂ ಪರಸ್ಪರ ಆಲಂಗಿಸಿಕೊಂಡು ಕುಣಿದು ಮುಕ್ತಾಯ ಮಾಡುತ್ತಾರೆ. ಕೊಡಗಿನ ದೇವಣಗೇರಿ, ಬೆಟ್ಟಗೇರಿ ಮುಂತಾದ ಕಡೆಗಳಲ್ಲಿ ಹೆಸರಾಂತ ತಟ್ಟೆ ಪರಿಯಕಳಿ ಕಲಿಗಳಿದ್ದಾರೆ.

## ಪೀಲಿಯಾಟ್

ಪೀಲಿ ಎಂದರೆ ಕೊಡವ ಭಾಷೆಯಲ್ಲಿ ನವಿಲುಗರಿಯ ಕಂತೆ. ಬೆನ್ನ ಮೇಲೆ ನವಿಲುಗರಿಗಳನ್ನು ಕಟ್ಟಿಕೊಂಡು ದುಡಿ, ಡೋಲು, ಕೊಂಬು, ಪರೆ, ತಾಳ, ವಾದ್ಯಗಳ ಸಂಗೀತಕ್ಕೆ ಅನುಗುಣವಾಗಿ ನಡೆಸುವ ಕುಣಿತಕ್ಕೆ



ಪೀಲಿಯಾಟ್ ಎಂದು ಕರೆಯುತ್ತಾರೆ. ಅತ್ಯಾಕರ್ಷಕವಾಗಿ ನವಿಲಿನಂತೆ ಕುಣಿಯುವ ಈ ಮನಮೋಹಕ ನೃತ್ಯವು ದೇವತಾರಾಧನೆಯ ಅಂಗವಾಗಿ ಬೆಳೆದು ಬಂದಿದೆ. ಇಂತಿಷ್ಟೇ ಜನರಿರಬೇಕೆಂಬ ನಿಯಮವೇನಿಲ್ಲ. ಸಾಮಾನ್ಯವಾಗಿ ದೇವಾಲಯಗಳ ಬಳಿ ಪ್ರದರ್ಶಿಸುವ ಈ ಕುಣಿತದಲ್ಲಿ ಕಲಾವಿದರು ದೇವಾಲಯದ ಪ್ರಾಕಾರದ ಸುತ್ತಲೂ ನವಿಲಿನಂತೆ ಕುಪ್ಪಳಿಸುತ್ತಾ, ಕೇಕೆ ಹಾಕುತ್ತಾ, ಒನಪು ವಯ್ಯಾರಗಳನ್ನು ಪ್ರದರ್ಶಿಸುವುದನ್ನು ನೋಡಲು ಬಲು ಸೊಗಸಾಗಿರುತ್ತದೆ.

ಕೊಡಗಿನ ವೀರಾಜಪೇಟೆ ತಾಲ್ಲೂಕಿನ ಕೆದಮುಳ್ಳೂರು, ಶ್ರೀಮಂಗಲದ ಕಾಡುಗಳಲ್ಲಿ ವಾಸಿಸುವ ಕುಡಿಯರ ಪೀಲಿಯಾಟ್ ಕುಣಿತದಲ್ಲಿ ಗಂಡಸರು ಪ್ರತ್ಯೇಕವಾಗಿ ಮತ್ತು ಹೆಂಗಸರು ಗಂಡಸರು ಒಟ್ಟಾಗಿ ನರ್ತಿಸುತ್ತಾರೆ. ಕೊಡವರ ರೀತಿಯಲ್ಲೇ ಬಿಳಿಯ ನಿಲುವಂಗಿ, ಪಾಯಿಜಾಮ, ನಡುವಿಗೆ ವಸ್ತ್ರ, ತಲೆಗೆ ಪೇಟ ಧರಿಸಿದ ಗಂಡಸರು ಮತ್ತು ಕೊಡವ ಹೆಂಗಸರಂತೆ ಕುಡಿಯ ಮಹಿಳೆ ನೆರಿಗೆ ಹಿಂದಕ್ಕೆ ಹಾಕಿ ಹೆಗಲ ಮೇಲಿನಿಂದ ಸೆರಗು ತಂದು ಎದೆಗೆ ಕಟ್ಟುತ್ತಾರೆ. ಡೋಲಿನ ಸದ್ದಿಗನುಗುಣವಾಗಿ ತಮ್ಮ ಎರಡೂ ತೋಳುಗಳನ್ನೆತ್ತಿ ಕೈಗಳನ್ನು ಬಾಗಿಸುತ್ತಾ ಬಗ್ಗಿ ಎದ್ದು ಹಿಂದೆ ಮುಂದೆ ತಿರುಗುತ್ತಾ ಕುಣಿಯುವ ರೀತಿಯು ಅತ್ಯಂತ ಆಕರ್ಷಣೀಯವಾದುದು.

## ಬಾಳೋಪಾಟ್

ಕೊಡಗಿನಲ್ಲಿ ಮಾತ್ರ ಕೇಳಿ ಬರುವ, ಪ್ರಧಾನವಾಗಿ ಜೀವನವನ್ನು ಕುರಿತ ಹಾಡುಗಳಾದ್ದರಿಂದ ಬಾಳೋಪಾಟ್ ಎಂದು ಹೆಸರಾಗಿದೆ. ಹಬ್ಬಹರಿದಿನಗಳಲ್ಲಿ,, ಉತ್ಸವ ಸಮಾರಂಭಗಳಲ್ಲಿ ದುಡಿ ವಾದ್ಯವನ್ನು ಬಾರಿಸಿಕೊಂಡು ಹಾಡುತ್ತಾರೆ. ಈ ಹಾಡುಗಳನ್ನು ಹೇಳುವ ಗುಂಪಿನಲ್ಲಿ ನಾಲ್ಕು ಮಂದಿ ಇರುತ್ತಾರೆ. ಇವರೆಲ್ಲರೂ ಬಿಳಿಯ ಬಣ್ಣದ ಉದ್ದನೆಯ ನಿಲುವಂಗಿಯನ್ನು ಧರಿಸುತ್ತಾರೆ. ಇದನ್ನು ಕುಪ್ಪಿಯ ಎನ್ನುತ್ತಾರೆ. ನಿಲುವಂಗಿಯ ಮೇಲೆ ಸೊಂಟಕ್ಕೆ ಮೂರು ನಾಲ್ಕು ಸುತ್ತು ಸುತ್ತಿದ ಉದ್ದವಿರುವ ಕೆಂಪು ಬಣ್ಣದ ರೇಷ್ಮೆ ದಟ್ಟಿಯನ್ನು (ಇದನ್ನು ಚೇಲೆ ಎನ್ನುತ್ತಾರೆ) ಕಟ್ಟಿಕೊಂಡಿರುತ್ತಾರೆ. ಬಿಳಿಯ ರುಮಾಲು ಅಥವಾ ಕೆಂಪು ಬಟ್ಟೆಯನ್ನು ತಲೆಗೆ ಕಟ್ಟಿಕೊಂಡು ಕೈಗಳಲ್ಲಿ ಕಂಚಿನಿಂದ ಮಾಡಿದ ದುಡಿವಾದ್ಯವನ್ನು ಹಿಡಿದಿರುತ್ತಾರೆ. ಇವರೆಲ್ಲರೂ ಒಂದು ಕಡೆ ನಿಂತು ದುಡಿವಾದ್ಯವನ್ನು ಬಾರಿಸುತ್ತಾ ಅದರ ನಾದದ ಗತ್ತಿಗೆ ಅನುಸಾರವಾಗಿ ಹಾಡುಗಳನ್ನು ಹೇಳಲು ಪ್ರಾರಂಭಿಸುತ್ತಾರೆ. ಮತ್ತಿಬ್ಬರು ಅದರ ಮುಂದಿನ ಎರಡು ಸಾಲುಗಳನ್ನು ಹೇಳಿ ಪ್ರಾರಂಭಿಸುತ್ತಾರೆ. ಮತ್ತಿಬ್ಬರು ಅದರ ಮುಂದಿನ ಎರಡು ಸಾಲುಗಳನ್ನು ಹಾಡಿ ಮುಂದುವರಿಸುತ್ತಾರೆ. ಇದೇ ಕ್ರಮದಲ್ಲಿ ಹಾಡುಗಳನ್ನು ಹೇಳಿಕೊಂಡು ಹೋಗುತ್ತಾರೆ. ಹಾಡು ಮತ್ತು ವಾದ್ಯಗಳು ಸಮಗೂಡಿ ಸಾಗುವ ಬಾಳೋಪಾಟ್‌ನಲ್ಲಿ ಕಲಾವಿದರು ಒಂದೇ ಸ್ಥಳದಲ್ಲಿ ನಿಂತು ಹಾಡುವುದರಿಂದ ಕುಣಿತವಿಲ್ಲ.

## ಬಿಲ್ಲಾಟ್

ಕೊಡಗಿನಲ್ಲಿ ಪ್ರತಿ ವರ್ಷ ನಡೆಯುವ ಭದ್ರಕಾಳಿ ಉತ್ಸವದ ಸಂದರ್ಭದಲ್ಲಿ ಹೆಣ್ಣುದೇವರ ಆರಾಧನೆಗಾಗಿ ರೂಢಿಗೆ ಬಂದ ಕುಣಿತ.

ಈ ಕುಣಿತದಲ್ಲಿ ಎಷ್ಟು ಜನರು ಬೇಕಾದರೂ ಭಾಗವಹಿಸಬಹುದು. ಹಾಡುವವರು ಬಿಳಿಯ ಬಣ್ಣದ 'ಕುಪ್ಪಿಯ'ವನ್ನು, ಕುಣಿಯುವವರು ಕಪ್ಪು ಬಣ್ಣದ 'ಕುಪ್ಪಿಯ'ವನ್ನು ಧರಿಸುವರು.ಕೊಡವರ ವೇಷವನ್ನು ಧರಿಸುವ ಈ ಕಲಾವಿದರು ಕಯಯಲ್ಲಿ ಸಣ್ಣ ಚೌರಿ, ಕೊಂಬುಗಳನ್ನು ಹಿಡಿದುಕೊಂಡು ಮೇದರ ಗಂಟೆಯ ನಾದಕ್ಕೆ ಸರಿಯಾಗಿ ಕುಣಿಯುತ್ತಾರೆ. ಈ ಕುಣಿತದಲ್ಲಿ ಕೊಡವರು ಕುಣಿಯುವವರಾದರೆ ಮೇದರು ಹಿಮ್ಮೇಳ ಒದಗಿಸುತ್ತಾರೆ.

ಮಣಿ ಎಂಬ ವಾದ್ಯವನ್ನು ಈ ಕುಣಿತಕ್ಕೆ ವಿಶೇಷವಾಗಿ ಬಳಸುವರು. ಕಂಚಿನಿಂದ ಮಾಡಿದ ಈ ವಾದ್ಯ ೧೦ ಅಂಗುಲ ಸುತ್ತಳತೆಯಿಂದ ಕೂಡಿರುತ್ತದೆ. ಒಂದು ಅಡಿ ಉದ್ದ, ಒಂದೂವರೆ ಅಂಗುಲ ದಪ್ಪದ ಗಡುಸಾದ ಮರದ ಕೋಲಿನಿಂದ ಅದನ್ನು ಬಡಿಯುವರು. ಇದರ ಜೊತೆಗೆ ಸಂದರ್ಭಾನುಸಾರವಾಗಿ ಎರಡು ಪರೆಯನ್ನು ಬಳಸುವರು.

## ಬೊಳುಕಾಟ್

ಬೊಳುಕಾಟ್ ಕೊಡವರಲ್ಲಿ ರೂಢಿಯಲ್ಲಿರುವ ಸಮರ ಕುಣಿತ. ಈ ಕುಣಿತವು ಕೊಡವರ ವೀರ ಪರಂಪರೆಯನ್ನು ಶೌರ್ಯ ಸಾಹಸಗಳನ್ನು ಭಾವನಾತ್ಮಕ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ. ಸದ್ಯಕ್ಕೆ ಬೊಳುಕಾಟ್ ಮನರಂಜನೆಯ ಸಾಧನವಾಗಿ ಕೊಡಗು ಜಿಲ್ಲೆಯಲ್ಲಿ ಉಳಿದುಕೊಂಡು ಬಂದಿದೆ. ಬೊಳಕ್ ಎಂದರೆ ಕೊಡವ ಭಾಷೆಯಲ್ಲಿ ಬೆಳಕು, ದೀಪ ಎಂದರ್ಥ. ಪರಶಿವನು ಭಸ್ಮಾಸುರನನ್ನು ಸಂಹಾರ ಮಾಡಿದ ನಂತರ ವೀರಾವೇಶದಲ್ಲಿ ೩೨ ಬಗೆಯ ನೃತ್ಯ ಪ್ರಕಾರಗಳನ್ನು ಪ್ರದರ್ಶಿಸಿದನಂತೆ. ಅದರ ಪ್ರತಿರೂಪವಾದ ಬೊಳುಕಾಟವು ಸಹ ಒಂದು ಬಗೆಯ ನೃತ್ಯ ಸಮುಚ್ಚಯ. ಬೆಳಕಿನ ಸುತ್ತ ವೈವಿಧ್ಯಮಯವಾದ ರೀತಿಯಲ್ಲಿ ಕೊಡವ



ಗಂಡಸರು ಸುಮಾರು ೧೭ ಬಗೆಯ ನೃತ್ಯ ಭಂಗಿಗಳಲ್ಲಿ ಕುಣಿತ ನಡೆಸುತ್ತಾರೆ.

ಬೊಳುಕಾಟದಲ್ಲಿ ಇಷ್ಟೇ ಕಲಾವಿದರಿರಬೇಕೆಂಬ ನಿಯಮವೇನಿಲ್ಲವಾದರೂ ಸುಮಾರು ೧೫ ರಿಂದ ೨೦ ಮಂದಿ ಪಾಲ್ಗೊಳ್ಳುತ್ತಾರೆ. ತಮ್ಮ ಸಾಂಪ್ರದಾಯಿಕ ವೇಷಭೂಷಣಗಳಾದ ಬಿಳಿಯ ಅಂಗಿ, ಅದರ ಮೇಲೊಂದು ಕರಿಯ ನಿಲುವಂಗಿ, ತಲೆಗೆ ಬಿಳಿಯ ರುಮಾಲು, ಸೊಂಟಕ್ಕೆ ರೇಷ್ಮೆ ಪಟ್ಟಿ ಕಟ್ಟಿ ಪೀಚೆಕತ್ತಿ ಸಿಕ್ಕಿಸಿಕೊಂಡು ಎಡಗೈಯಲ್ಲಿ ಚಾಮರ, ಬಲಗೈಯಲ್ಲಿ ಬಿಚ್ಚುಗತ್ತಿ ಹಿಡಿದು ಎಣ್ಣೆ ದೀಪದ ಸುತ್ತ ವರ್ತುಲಾಕಾರವಾಗಿ ನಿಲ್ಲುತ್ತಾರೆ. ಹಾಡುವವರು ಕುತ್ತೆಂಬೊಳಿಚದ ಸುತ್ತ ಒಂದು ಪ್ರಶಸ್ತ ವೇದಿಕೆಯಲ್ಲಿ ನಿಂತು ತಮ್ಮ ಸಾಂಪ್ರದಾಯಿಕ ದುಡಿ ವಾದ್ಯ ಬಾರಿಸುತ್ತಾ ಹಾಡುತ್ತಾರೆ. ತಂಡದ ನಾಯಕನು ಹಾಡಿನೊಂದಿಗೆ ಕುಣಿತ ಆರಂಭಿಸುತ್ತಾನೆ. ಆಗ

ಎಲ್ಲರೂ ಚಾಮರಗಳನ್ನು ಬೀಸುತ್ತಾ ಕುಣಿಯುತ್ತಾರೆ. ಕುಣಿತಕ್ಕೆ ಹಿನ್ನೆಲೆಯಾಗಿ ಪರೆ, ಡೋಲು, ತಾಳ ವಾದ್ಯಗಳನ್ನು ಬಳಸುತ್ತಾರೆ. ವಾದ್ಯಗಳ ಸದ್ದಿಗೆ ಅನುಗುಣವಾಗಿ ಗತ್ತಿನ ಹೆಜ್ಜೆಗಳನ್ನು ಹಾಕುತ್ತಾ ಮಂಡಲಾಕಾರದಲ್ಲಿ ಕುಣಿಯುತ್ತಾರೆ. ಭಾವಸೂಚಕ ಉದ್ಗಾರಗಳಾದ ಹೋ, ಹೇ, ಹಾ ಎಂದು ಕೂಗುತ್ತಾ ನೃತ್ಯದ ಗತಿಗಳನ್ನು ಬದಲಾಯಿಸುತ್ತಾರೆ. ಕುಣಿತದ ಕೆಲವು ವಿನ್ಯಾಸಗಳಂತೂ ಪ್ರೇಕ್ಷಕರ ಮನಸ್ಸಿನಲ್ಲಿ ರೋಮಾಂಚನವನ್ನುಂಟು ಮಾಡುವಂತಿರುತ್ತವೆ. ಕೈಯಲ್ಲಿ ಹಿಡಿದಿರುವ ಒಡಿಕತ್ತಿಗಳು ಇತರರಿಗೆ ತಗುಲದಂತೆ ಚಾಕಚಕ್ಯತೆಯಿಂದ ಕುಣಿತ ನಿರ್ವಹಿಸುತ್ತಾರೆ.

## ಭೂತದ ಕುಣಿತ

ಕೊಡಗಿನ ಮೂಲ ನಿವಾಸಿಗಳೆಂದು ಕರೆದುಕೊಳ್ಳುವ ಮಲೆಯರು ಮತ್ತು ಪಣಿಕರು ಮೂಲತಃ ಭೂತಾರಾಧಕರು. 'ತೆರೆ' ಎಂಬ ಭೂತದ ಕೋಲ ನಡೆಸುತ್ತಾರೆ. ಈ ಕೋಲದಲ್ಲಿ ಯಕ್ಷಗಾನದ ಪಾತ್ರಧಾರಿಗಳಂತೆ ಮುಖವರ್ಣಿಕೆ ಅಲಂಕಾರ, ತಲೆಯ ಮೇಲೆ ಮತ್ತು ಸೊಂಟಕ್ಕೆ ತೆಂಗಿನ ಎಳೆಯ ಗರಿಗಳಿಂದ ಮಾಡಿದ ತಿರಿಗಳನ್ನು ಧರಿಸಿ, ತುಳು-ಮಲೆಯಾಳ ಮಿಶ್ರಿತ ಹಾಡುಗಳನ್ನು ಹಾಡುತ್ತಾ ಯಕ್ಷಗಾನದ ಕುಣಿತಗಳಂತೆಯೇ ಕುಣಿತ ಮಾಡುತ್ತಾರೆ. ಹಿಮ್ಮೇಳಕ್ಕೆ ಚಂಡೆ ಮತ್ತು ನಾಗಸ್ವರ ವಾದನವಿರುತ್ತದೆ. ಪಣಿಕ್ಕರು ಮತ್ತು ಪೆರಾಜಿಯವರು ಭೂತದ ಕುಣಿತವನ್ನು ಪ್ರದರ್ಶಿಸುತ್ತಾ ಬಂದಿರುತ್ತಾರೆ.

## ವಾಲಗತ್ತಾಟ್

ಕೊಡಗು ಜಿಲ್ಲೆಯಲ್ಲಿರುವ ಜನಪದ ಕುಣಿತ. ವಾಲಗ ವಾದ್ಯಗಳನ್ನು ಪ್ರಧಾನವಾಗಿ ಬಳಸಿ ಕುಣಿಯುವುದರಿಂದ ಇದಕ್ಕೆ ವಾಲಗತ್ತಾಟ್ ಎಂದು ಹೆಸರಾಗಿದೆ. ಇದು ಹೆಚ್ಚಾಗಿ ಹಬ್ಬಹರಿದಿನ,

ವಿವಾಹ, ಸಾರ್ವಜನಿಕ ಸಭೆ ಹಾಗೂ ಸಂತೋಷ ಕೂಟಗಳಲ್ಲಿ ಉತ್ಸಾಹ, ಉಲ್ಲಾಸಗಳ ಸಂಕೇತವಾಗಿ ನಡೆಯುತ್ತದೆ. ಹಿರಿಯರ ಸಾವಿನ ಸಂದರ್ಭದಲ್ಲಿಯೂ ಈ ಕುಣಿತವು ಕುದ್ಕೆಪರೆ ಎಂಬ ದುಃಖಸೂಚಕ ವಾದ್ಯದ ಹಿನ್ನೆಲೆಯೊಂದಿಗೆ ಬೇರೊಂದು ರೀತಿಯಲ್ಲಿ ನಡೆಯುವುದೆಂದು ಹೇಳುತ್ತಾರೆ.

ಹಿಂದೆ ರಾಜ ಮಹಾರಾಜರುಗಳ ನಡುವೆ ಯುದ್ಧಗಳು ಜರುಗುತ್ತಿದ್ದ ಸಂದರ್ಭಗಳಲ್ಲಿ ಜಯಶೀಲರಾದವರು ಊಟೋಪಚಾರ ನಡೆಸಿ ವಾಲಗಗಳೊಂದಿಗೆ ಕುಣಿದು ವಿಜಯೋತ್ಸವವನ್ನು ಆಚರಿಸುತ್ತಿದ್ದರಂತೆ. ವಾಲಗತ್ತಾಟ್ ಕುಣಿತದಲ್ಲಿ ಭಾಗವಹಿಸುವ ಕಲಾವಿದರ ಸಂಖ್ಯೆಗೆ ಮಿತಿ ಎಂಬುದಿಲ್ಲ. ಸಾಂಪ್ರದಾಯಿಕ ಉಡುಪು ಧರಿಸಿದ ಕಲಾವಿದರೊಂದಿಗೆ ನಿತ್ಯ ಉಡುಪಿನ ಕಲಾವಿದರೂ ಸೇರಿ ಕುಣಿಯುತ್ತಾರೆ. ಈ ಕುಣಿತಕ್ಕೆ ಹಿನ್ನೆಲೆಯಾಗಿ ವಾಲಗ, ಮೋರಿ, ಡೋಲು, ತಾಳ, ಪರೆ, ಕೊಂಬು ಮುಂತಾದ ವಾದ್ಯಗಳನ್ನು ಬಳಸುತ್ತಾರೆ. ವಾಲಗತ್ತಾಟ್‌ದಲ್ಲಿ ಬಹುತೇಕ ಪುರುಷರೇ ಭಾಗವಹಿಸುವುದಾದರೂ ಈಚೆಗೆ ಹೆಣ್ಣು ಮಕ್ಕಳೂ ಭಾಗವಹಿಸುವುದು ರೂಢಿಯಲ್ಲಿದೆ. ಪುರುಷರು ಕೈಯಲ್ಲಿ ಪೀಚೆಕತ್ತಿ, ಒಡಿಕತ್ತಿಗಳನ್ನು ಹಿಡಿದು ಕುಣಿಯುತ್ತಾರೆ.

## ಸುಗ್ಗಿ ಕುಣಿತ

ಕೊಡಗಿನ ಹುತ್ತರಿ ಹಬ್ಬದ ಅನಂತರದ ದಿನಗಳಲ್ಲಿ ಪ್ರದರ್ಶನಗೊಳ್ಳುವ ಸುಗ್ಗಿ ಕುಣಿತವನ್ನು, ಸುಮಾರು ಹತ್ತು ಹದಿನೈದು ಮಂದಿ ಕಲಾವಿದರು ತಮ್ಮ ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿ ಕೈಗಳಲ್ಲಿ ಬಿಚ್ಚುಗತ್ತಿ ಹಿಡಿದು, ಕತ್ತಿಗಳನ್ನು ಬೀಸುತ್ತಾ ವೈವಿಧ್ಯಮಯವಾಗಿ ಕುಣಿಯುತ್ತಾರೆ. ಸುಗ್ಗಿ ಕುಣಿತವೂ ಸಹ ಪರಿಯಕಳಿಯಂತೆಯೇ ಪ್ರಾಚೀನ ಯುದ್ಧ ನೃತ್ಯ. ಹಿಮ್ಮೇಳದ

ಡೋಲಿನ ಸದ್ದಿಗನುಗುಣವಾಗಿ ಕುಣಿಯುವ ಈ ಕುಣಿತದಲ್ಲಿ ಆರು ಬಗೆಯ ಹೆಜ್ಜೆಗಳಿವೆ. ಕೊಡಗಿನ ಗೌಡರು ಅಥವಾ ಜಮ್ಮ ಕೊಡವರು ಈ ಕುಣಿತವನ್ನು ಸಂಪ್ರದಾಯವನ್ನಾಗಿ ಬೆಳೆಸಿಕೊಂಡು ಬಂದಿದ್ದಾರೆ. ಶನಿವಾರಸಂತೆ, ಚೆಂಬಳೂರು ಭಾಗದಲ್ಲಿ ಈ ಕುಣಿತವು ಕಂಡುಬರುತ್ತದೆ.

## ಹುತ್ತರಿ ಕೋಲಾಟ

ಕೊಡವರ ದೊಡ್ಡ ಹಬ್ಬ ಪುತ್ತರಿ ಅಥವಾ ಹುತ್ತರಿ. ಬತ್ತದ ಕೊಯಿಲನ್ನು ಕಟಾವು ಮಾಡುವ ಸುಗ್ಗಿಗೆ ಕೊಡವರು ಹುತ್ತರಿ ಎಂದು ಕರೆಯುತ್ತಾರೆ.



ಈ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವ ಕೊಡವರು ತಮ್ಮ ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿ ಕೋಲಾಟವನ್ನು ಪ್ರದರ್ಶಿಸುತ್ತಾರೆ. ಸುಮಾರು ಮೂರು ನಾಲ್ಕು ಅಡಿ ಉದ್ದದ ಬೆತ್ತದ

ಕೋಲುಗಳನ್ನು ಕೈಯಲ್ಲಿ ಹಿಡಿದುಕೊಂಡು ಕುಣಿವ ನೃತ್ಯವು ಹುತ್ತರಿ ಕೋಲಾಟವೆಂದೇ ಹೆಸರಾಗಿದೆ. ಸುಗ್ಗಿಯ ಸಂಭ್ರಮದ ಹರುಷ ಮತ್ತು ಮನರಂಜನೆ ಈ ಕುಣಿತದ ಉದ್ದೇಶ. ಊರಮುಂದೆ ಅಂದರೆ ಮೈದಾನದ ಮಧ್ಯದಲ್ಲಿರುವ ಅಶ್ವತ್ಥ ವೃಕ್ಷದ ಸಾಂಪ್ರದಾಯಿಕ ವೇಷ ಧರಿಸಿದ ಕೊಡವರು ಹಾಡುತ್ತಾ ಕೋಲು ಹುಯ್ಯುತ್ತಾ ಕುಣಿಯುತ್ತಾರೆ. ಪರೆ ಎಂಬ ಚರ್ಮ ವಾದ್ಯವು ಈ ಕುಣಿತದಲ್ಲಿ ಹಿಮ್ಮೇಳವನ್ನು ಒದಗಿಸುತ್ತದೆ. ಕುಣಿವವರು ಕೊಡವರಾದರೆ ಪರೆ ಹೊಡೆಯುವವನು ಮೇದರವನು. ಹಾಡುಗಳಲ್ಲಿ ಹಾಸ್ಯ, ನೀತಿ, ಚೋದ್ಯ, ಗೇಲಿಗಳು ಕಂಡು ಬರುತ್ತವೆ. ಹುತ್ತರಿ ಕೋಲಾಟದಲ್ಲಿ ಜಪ್ಪೆಕೋಲು, ಚಂದ ತೊರೆಕೋಲು, ಪಾತುರೆಕೋಲು ಹೀಗೆ ನಾನಾ ಬಗೆಗಳಿವೆ.

## ಕೊಡವ ಕೆಲವು ಕಲಾವಿದರ ವಿಳಾಸಗಳು

### ಬೊಳಕಾಟ್

೧. **ಹಾವೇರಿ ಗ್ರಾಮ ಕಲಾತಂಡ**
ಹಾವೇರಿಗ್ರಾಮ
ಕಂದನಕೊಲ್ಲಿ ಅಂಚೆ,
ಸೋಮವಾರಪೇಟೆ ತಾಲ್ಲೂಕು
ಕೊಡಗು ಜಿಲ್ಲೆ.

೨. **ಬಲಮುರಿ ಗ್ರಾಮ ಕಲಾ ತಂಡ**
ಬಲಮುರಿ–ಅಂಚೆ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

೩. **ಕಾಂತೂರು ಗ್ರಾಮ ಕಲಾ ತಂಡ**
ಮೂರ್ನಾಡು–ಅಂಚೆ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

೪. **ಬಿ. ಬಿ. ಗೌರಮ್ಮ**
ಮಹಿಳಾ ಸಂಘ ಕಲಾತಂಡ,
ಹುದಿಕೇರಿ
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ

೫. **ಡಿ. ಪಿ. ನಂಜಪ್ಪ**
ಬೊಳಕಾಟ್ ಕಲಾ ತಂಡ,
ಬಾಲಸಮಂದೂರು, ಕೊಡಗು ಜಿಲ್ಲೆ.

೬. **ಪುಗ್ಗೇರ ಎಂ. ಕರುಂಬಯ್ಯ**
ದೇವಣಗೇರಿ, ವಿರಾಜಪೇಟೆ,
ಕೊಡಗು ಜಿಲ್ಲೆ.

೭. **ಪಾಲಂದಿರ ಪಿ. ದೇವಯ್ಯ**
ಬಲಮುರಿ ಗ್ರಾಮ
ಮಡಿಕೇರಿ ತಾಲ್ಲೂಕು
ಕೊಡಗು ಜಿಲ್ಲೆ.

೮. **ಯುವಕ ಸಂಘ**
ಹರಿಹರ, ಟಿ ಶೆಟ್ಟಿಗೇರಿ ಅಂಚೆ,
ವಿರಾಜಪೇಟೆ ತಾಲ್ಲೂಕು,
ಕೊಡಗುಜಿಲ್ಲೆ

೯. **ಯುವಕ ಸಂಘ**
ಬೆಕ್ಕೆಸೊಡ್ಲೂರು,
ಬಾಲಸಮಂದೂರು ಅಂಚೆ,
ವೀರಾಜಪೇಟೆ ತಾಲ್ಲೂಕು
ಕೊಡಗು ಜಿಲ್ಲೆ

### ಭೂತ ಕುಣಿತ

೧. **ಮಲಯರ ದೇವಣ್ಣ**
ನೆಲಾಜಿ–ಅಂಚೆ, ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

೨. **ಮಹಿಳಾ ಸಮಾಜ**
ಹುಂದಿಕೇರಿ, ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

೩. **ಸುಬ್ರಮಣ್ಯ ಮಹಿಳಾ ಸಮಾಜ**
ಹರಿಹರ, ಟಿ ಶೆಟ್ಟಿಗೇರಿ ಅಂಚೆ,
ವಿರಾಜಪೇಟೆ ತಾಲ್ಲೂಕು,
ಕೊಡಗುಜಿಲ್ಲೆ

## ದಪ್ಪುರಾವತಿ

೧. ಮದಿರೆ ಕರಂಡ ಎ. ಅಹಮದ್
ಎಮ್ಮೆಮಡು ಗ್ರಾಮ–ಅಂಚೆ,
ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ

**ಹುತ್ತರಿ ಕುಣಿತ**

೧. ಎಚ್. ಮುದ್ದು
ಮೈತಾಡಿ ಗ್ರಾಮ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

೨. ಯುವಕ ಸಂಘ
ಬಾಡಗ, ದೇವಣಗೇರಿ, ಬಾಲಂಬೇರಿ,
ಕೊಡಗು ಜಿಲ್ಲೆ.

೩. ಹುತ್ತರಿ ಕೋಲಾಟ ಮಂಡಳಿ
ಬಾಹುಲಿ ಗ್ರಾಮ ಕಲಾತಂಡ,
ಪಗರೆ ಅಂಚೆ, ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

೪. ಪಿ. ಎಂ. ಕರುಂಬಯ್ಯ
ಚಂಬೆಬೆಳ್ಳೂರು, ದೇವಣಗೇರಿ ಅಂಚೆ,
ವಿರಾಜಪೇಟೆ ತಾಲ್ಲೂಕು,
ದಕ್ಷಿಣ ಕೊಡಗು ಜಿಲ್ಲೆ.

೫. ಮಾದ್ರಿ ಗ್ರಾಮ ಕಲಾತಂಡ
ಮಾದ್ರಿ ಗ್ರಾಮ, ಚೆಂಬಳೂರು ಅಂಚೆ,
ಸೋಮವಾರಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

೬.. ಪಾಲಂದಿರ ಪಿ. ದೇವಯ್ಯ
ಬಲಮುರಿ ಗ್ರಾಮ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

## ಕೊಂಬಾಟ್

೧. ಚೇರಾಲ ಶ್ರೀಮಂಗಲಗ್ರಾಮ ಕಲಾತಂತ
ಚೇರಾಲ ಶ್ರೀಮಂಗಲ, ಬೆಟ್ಟಳ್ಳಿ ಅಂಚೆ,
ಸೋಮವಾರಪೇಟೆ ತಾಲ್ಲೂಕು.
ಕೊಡಗು ಜಿಲ್ಲೆ.

೨. ಬಾವುಲಿ ಗ್ರಾಮ ಕಲಾತಂಡ
ಬಾವಲಿ ಗ್ರಾಮ, ಪರಣೆ ಅಂಚೆ,
ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ.

೩. ಪಿ. ಎಂ. ಕರುಂಬಯ್ಯ
ಚಂಬೆಬೆಳ್ಳೂರು, ದೇವಣಗೇರಿ ಅಂಚೆ,
ವೀರಾಜಪೇಟೆ ತಾಲ್ಲೂಕು,
ದಕ್ಷಿಣ ಕೊಡಗು ಜಿಲ್ಲೆ.

## ಕೊಂಬುಕೊಟ್ಟ ವಾಲಗ

೧. ಹರಿಜನ ಮಾದು
ದೇವಣಗೇರಿ–ಅಂಚೆ
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

## ಕುಡಿಯರ ಕುಣಿತ

೧. ಕೆ. ಕೆ. ಜಯ
ಕೊದವಲ್ಲೂರು, ಕೋಣಕಾಡು ಅಂಚೆ,
ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

೨. ಆಮುಣ್ಣೆ
ಯರಕವಾಡಿ ಕುಡಿಯರು,
ಕಕ್ಕಬ್ಬೆ ಅಂಚೆ, ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

೩. ಅಚ್ಚು
ಯರಕಪಾಡಿ ಕುಡಿಯರು,
ಕಕ್ಕಬ್ಬೆ ಅಂಚೆ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

## ಪೀಲಿಯಾಟ್

೧. ಯರಳವಾಲ ಮುದಿಗ್ರಾಮಕಲಾ ತಂಡ
ಚಾವುಲ್ಲಿ ಅಂಚೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

೨. ಪಿ. ಎಂ. ಮಂದಪ್ಪ
ಚಂಬೆ ಬೆಳ್ಳೂರು, ದೇವಣಗೇರಿ ಅಂಚೆ,
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

೩. ಪಿ. ಎಂ. ಕರುಂಬಯ್ಯ
ಚಂಬೆಬೆಳ್ಳೂರು, ದೇವಣಗೇರಿ ಅಂಚೆ,
ವೀರಾಜಪೇಟೆ ತಾಲ್ಲೂಕು,
ದಕ್ಷಿಣ ಕೊಡಗು ಜಿಲ್ಲೆ.

## ಪರಿಯಕಳಿ

೧. ಬಲಮುರಿ ಗ್ರಾಮ ಕಲಾ ತಂಡ
ಬಲಮುರಿ ಗ್ರಾಮ ಅಂಚೆ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

೨. ಪಿ. ಎಂ. ಕರುಂಬಯ್ಯ
ಚಂಬೆಬೆಳ್ಳೂರು, ದೇವಣಗೇರಿ ಅಂಚೆ,
ವಿರಾಜಪೇಟೆ ತಾಲ್ಲೂಕು,
ದಕ್ಷಿಣ ಕೊಡಗು ಜಿಲ್ಲೆ

೩. ಯುವಕ ಸಂಘ
ಬಾಡಗ, ದೇವಣಗೇರಿ ಅಂಚೆ,
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

## ಉಮ್ಮತ್ತಾಟ್

೧. ಕೆ. ಎಂ. ಮೋಟಯ್ಯ
ಪೊನ್ನಂಪೇಟೆ, ವಿರಾಜಪೇಟೆ ಮಾರ್ಗ,
ಕೊಡಗು ಜಿಲ್ಲೆ.

೨. ಪ್ರಭಾ ನಾಣಯ್ಯ
ವಿರಾಜಪೇಟೆ-ಅಂಚೆ,
ಕೊಡಗು ತಾಲ್ಲೂಕು-ಜಿಲ್ಲೆ.

೩. ರಾಣಿ ಮಾಚಯ್ಯ
ಕಾವೇರಿ ಕಲಾ ಸಂಘ, ಹಿಲ್ ರಸ್ತೆ,
ಮಡಿಕೇರಿ, ಕೊಡಗು ಜಿಲ್ಲೆ.

೪. ಪಿ. ಕೆ. ಪೂವಮ್ಮ
ದೇವಣಗೇರಿ ಗ್ರಾಮ,
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

೫. ಬದುಮಂದ ಕಾಮವ್ವ ಮುದ್ದಪ್ಪ
ಕಿರುಂದಾಡು ಗ್ರಾಮ, ಪಾರಣೆ ಅಂಚೆ,
ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

೬. ಶೀಲ ಮತ್ತು ತಂಡ
ಮಹಿಳಾ ಸಮಾಜ, ಚಂಬೆ ಬೆಳ್ಳೂರು,
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

೭. **ಅಧ್ಯಕ್ಷರು, ಮಹಿಳಾ ಸಮಾಜ**
ಜೆ. ಶೆಟ್ಟಿಗೆರೆ–ಅಂಚೆ,
ದಕ್ಷಿಣ ಕೊಡಗು ಜಿಲ್ಲೆ.

೮. **ಮಹಿಳಾ ಮಂಡಳಿ**
ಬಿಟ್ಟಂಗಲ, ದಕ್ಷಿಣ ಕೊಡಗು.

೯. **ಮಹಿಳಾ ಸಮಾಜ**
ಕನೂರು, ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

## ವಾಲಗತ್ತಾಟ್

೧. **ಎಂ. ಕೆ. ಪೂವಯ್ಯ**
ಕಂದನಕೊಲ್ಲಿ–ಅಂಚೆ,
ಸೋಮವಾರಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ

## ಯರವರ ಕುಣಿತ

೧. **ಕುನ್ನಾರಿ**
ಕನಿಂಪುರ, ಗುಂಡ್ಲುಪೇಟೆ ತಾಲ್ಲೂಕು,
ಚಾಮರಾಜನಗರ ಜಿಲ್ಲೆ

೨. **ಸೃಷ್ಟಿ**
ಪೊನ್ನಂಪೇಟೆ,ಕೊಡಗು ಜಿಲ್ಲೆ.

೩. **ದೇವಣಗೇರಿ ಗ್ರಾಮ ಕಲಾ ತಂಡ**
ದೇವಣಗೇರಿ ಅಂಚೆ
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ

೪. **ಕೊಂಡಂಗೇರಿ ಯರವರ ಸಂಘ**
ಹುಲಗುಂದ ಅಂಚೆ,
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

೫. **ಫಣಿ ಯರವರ ಬೊಳಕ**
ಸಂಗಾಲ ಗ್ರಾಮ
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

## ಜನಪದ ಕಲೆ

ಕರ್ನಾಟಕದಲ್ಲಿ ಅಧಿಕ ಸಂಖ್ಯೆಯ ಜನಪದ ಕಲಾವಿದರಿದ್ದಾರೆ. ಇವರಲ್ಲಿ ಸ್ತ್ರೀ ಪುರುಷರಿಬ್ಬರೂ ಪ್ರಮುಖ ಪಾತ್ರ ವಹಿಸಿರುವುದು ವಿಶೇಷ. ಗಾಯನ, ನರ್ತನ, ವಾದ್ಯವಾದನ, ವೇಷಭೂಷಣ, ಪ್ರದರ್ಶನ ಮೊದಲಾದವುಗಳಲ್ಲಿ ಒಬ್ಬರಿಗಿಂತ ಒಬ್ಬರು ಮೇಲಾಗಿರುವುದನ್ನು ಕಾಣಬಹುದು. ಈ ಅಭಿಜಾತ ಕಲಾವಿದರು ತಲೆ ತಲಾಂತರದಿಂದ ಉಳಿಸಿಕೊಂಡು ಬಂದಿರುವ ಕಲೆಗಳು ಅಪಾರವಾಗಿವೆ, ವೈವಿಧ್ಯಮಯವಾಗಿವೆ. ಕರ್ನಾಟಕದಲ್ಲಿ ಪ್ರಚಾರದಲ್ಲಿರುವ, ಪ್ರಸಿದ್ಧವಾಗಿರುವ ಕೆಲವು ಪ್ರದರ್ಶನ ಕಲೆಗಳನ್ನು ಸಚಿತ್ರವಾಗಿ ಈ ಗ್ರಂಥದಲ್ಲಿ ಪರಿಚಯಿಸಿದೆ.

ಜನಪದ ಸಾಹಿತ್ಯ ಸಂಗ್ರಹ, ವಿಶ್ಲೇಷಣೆ, ವ್ಯಾಖ್ಯಾನದಲ್ಲಿ ಸೋಪಜ್ಞೆಯನ್ನು ಉಳಿಸಿಕೊಂಡಿರುವ ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ॥ ಚಕ್ಕೆರೆ ಶಿವಶಂಕರ್ ಜನಪದ ಕಲೆಗಳ ಪ್ರಸ್ತುತ ಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ಇದರಲ್ಲಿ ಕೊಡಗು ಪ್ರದೇಶದ ಪ್ರಸಿದ್ಧ ಕಲೆಗಳ ಮಾಹಿತಿಯಿದೆ.

**ಪ್ರೊ. ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು**

ಜಾನಪದ ಸಿರಿಭುವನ

ನಂ.1, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ ಇ ಎಲ್ ರಸ್ತೆ, ಬೆಂಗಳೂರು–5600054
ದೂರವಾಣಿ: 080–23605033 janapadaparishath@hotmail.com